ಕಬ್ಬು ಕಡಿಯುವವರ ಮಕ್ಕಳು ಶಿಕ್ಷಣ ಇಲ್ಲದೇ ಅನಕ್ಷರಸ್ಥರಾಗುತ್ತಿದ್ದಾರೆ. ಕಬ್ಬು ಕಡಿಯುವವರ ಮಕ್ಕಳು ಕೂಡಾ ಮುಂದೆ ಕಬ್ಬು ಕಡಿಯುವವರೆ ಆಗುತ್ತಾರೆಯೇ ವಿನಃ ಶಿಕ್ಷಣ ಪಡೆದು ಒಳ್ಳೆಯ ಜೀವನ ನಿರ್ವಹಿಸಲಾಗುವುದಿಲ್ಲ. ಅವರು ಊಟ ನೀರು ಅದರ ಬಗ್ಗೆ ಯೋಚಿಸದೆ ಹಾಗೆ ಶ್ರಮಿಸುತ್ತಾರೆ. ಈಗಿನ ಜಗತ್ತಿನಲ್ಲಿ ಯಾವ ಮಹಿಳೆಯು ಸುಮ್ಮನೆ ಕೈ ಕಟ್ಟಿಕೊಂಡು ಕೂಡುವವರ ಸಂಖ್ಯೆ ಬಹಳಷ್ಟು ಕಡಿಮೆ. ಮಹಿಳೆಯರು ಪತ್ರಿಯೊಂದು ಕ್ಷೇತ್ರದಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಕಬ್ಬು ಕಡಿಯುವವರ ಬಾಳು ಬಹಳಷ್ಟು ಕಷ್ಟಕರವಾಗಿದೆ. ಅವರಿಗೆ ಯಾವುದೇ ಹಬ್ಬ ಹರಿದಿನ ಬಂದರು ಕೂಡಾ ಅವರು ಆಚರಿಸುವುದಿಲ್ಲ.

# ಕಬ್ಬು ಕಡಿಯುವ ಕೂಲಿಕಾರರ ಬಾಳು ಕಹಿ ..!



ಸುಷ್ಮಾ ಪವಾರ

ಕಬ್ಬು ರುಚಿಯಾಗಿದೆ, ನಿಜ. ಆದರೆ ಅದನ್ನು ಕಟಾವು ಮಾಡುವ ಕಾರ್ಮಿಕರ ಬಾಳು ಕಹಿಯಾಗಿದೆ. ಅವರಿಗೆ ಊರಿಲ್ಲಾ ಸೂರಿಲ್ಲಾ. ಬದುಕಿನ ಬೇರು ಹುಡಕುತ್ತಾ ಊರೂರು ಅಲೆಯುತ್ತಾರೆ. ಸಂಸಾರದ ಚಿಂತೆಯನ್ನು ಬೆನ್ನಿಗೆ ಕಟ್ಟಿಕೊಂಡು, ಮೂರು ಹೊತ್ತಿನ ಕೂಳಿಗಾಗಿ ಬೆವರು ಸುರಿಸುತ್ತಾರೆ. ತಮ್ಮ ಕುಟುಂಬದ ಸಮೇತ ಅವರು ಗಂಟು ಮೂಟೆಯನ್ನು ಕಟ್ಟಿಕೊಂಡು, ಕಬ್ಬಿನ ಗದ್ದೆಗೆ ಕೆಲಸ ಹುಡುಕಿಕೊಂಡು ಹೋಗುತ್ತಾರೆ. ಅವರ ಮಕ್ಕಳ ಬಾಳು ಕತ್ತಲೆಯಾಗಿದೆ. ಶಿಕ್ಷಣದ ಬೆಳಕಿಲ್ಲದೆ ಕತ್ತಲೆಯಲ್ಲಿ ಕಾಲ ಕಳೆಯುತ್ತಾರೆ. ಯಾವ ಊರಿನ ಹೊಲಕ್ಕೆ ಹೋಗಿರುತ್ತಾರೊ, ಆ ಹೊಲದಲ್ಲಿಯೇ ಗುಡಿಸಲು ಕಟ್ಟಿಕೊಂಡು ಅಲ್ಲೇ ಆ ಕಬ್ಬು ಕಡಿಯುವವರೆಗೂ ಇರುತ್ತಾರೆ. ಕಬ್ಬು ಕಡಿಯುವಾಗ ಎಷ್ಟೇ ಸಮಸ್ಯೆಗಳು ಬಂದರು ಅದನ್ನು ಎದುರಿಸುತ್ತಾರೆ. ಕಬ್ಬು ಕಡಿಯುವಾಗ ವಿಷಜಂತುಗಳು ಮುಳ್ಳು ಕಂಟಿಗಳು ತೊಡಕಾಗಿ ಕಾಡುತ್ತವೆ. ಹಾವು ಬಂದರು ಅವರಿಗೆ ಅವರ ಮೈ ಮೇಲೆ ಪ್ರಜ್ಞೆ ಇರುವುದಿಲ್ಲಾ. ಮಳೆ ಬರಲಿ ಬಿಸಿಲಿರಲಿ ಅವರಿಗೆ ಯಾವ ತರಹದ ಚಿಂತೆ ಇರುವುದಿಲ್ಲಾ. ಕೆಲಸವೊಂದೇ ಅವರ ಗುರಿಯಾಗಿರುತ್ತದೆ.

ಆ ಕಬ್ಬು ಕಡಿಯುವವರ ಮಕ್ಕಳು ಶಿಕ್ಷಣ ಇಲ್ಲದೇ ಅನಕ್ಷರಸ್ಥರಾಗುತ್ತಿದ್ದಾರೆ. ಕಬ್ಬು ಕಡಿಯುವವರ ಮಕ್ಕಳು ಕೂಡಾ ಮುಂದೆ ಕಬ್ಬು ಕಡಿಯುವವರೆ ಆಗುತ್ತಾರೇ, ವಿನಃ ಶಿಕ್ಷಣ ಪಡೆದು ಒಳ್ಳೆಯ ಜೀವನ ನಿರ್ವಹಿಸಲಾಗುವುದಿಲ್ಲ. ಅವರು ಊಟ ನೀರು ಅದರ ಬಗ್ಗೆ ಯೋಚಿಸದೆ ಹಾಗೆ ಶ್ರಮಿಸುತ್ತಾರೆ. ಈಗಿನ ಜಗತ್ತಿನಲ್ಲಿ ಯಾವ ಮಹಿಳೆಯು ಸುಮ್ಮನೆ ಕೈ ಕಟ್ಟಿಕೊಂಡು ಕೂಡುವವರ ಸಂಖ್ಯೆ ಬಹಳಷ್ಟು ಕಡಿಮೆ. ಮಹಿಳೆಯರು ಪತ್ರಿಯೊಂದು ಕ್ಷೇತ್ರದಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಕಬ್ಬು ಕಡಿಯುವವರ ಬಾಳು ಬಹಳಷ್ಟು ಕಷ್ಟಕರವಾಗಿದೆ. ಅವರಿಗೆ ಯಾವುದೇ ಹಬ್ಬ ಹರಿದಿನ ಬಂದರು ಕೂಡಾ ಅವರು ಆಚರಿಸುವುದಿಲ್ಲಾ. ಕಬ್ಬು ಕಡಿಯುವವರಲ್ಲಿ ಜಾಸ್ತಿ ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಅವರು ಗಂಡ ಮನೆ ಮಕ್ಕಳನ್ನು ನೋಡಿಕೊಳ್ಳುತ್ತಾ, ದುಡಿಮೆಯಲ್ಲಿ ಸಾಗುತ್ತಾರೆ. ಇಷ್ಟಾದರು ಅವರಿಗೆ ಕನಿಷ್ಠ ಕೂಲಿ ದೊರಕುತ್ತದೆ. ಇದು ನಿಲ್ಲಬೇಕು ದುಡಿಮೆಗೆ ತಕ್ಕ ಪ್ರತಿಫಲ ನೀಡಬೇಕು. ಅಂದಾಗ ಮಾತ್ರ ಇವರ ಬಾಳಿನಲ್ಲಿ ಸಕ್ಕರೆ ಸವಿ ತುಂಬುತ್ತದೆ.

Scanned with CamScanner